## ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ. ಕವಿವಿ/ಉದ್ಯಾನ/2020-21/ ದಿನಾಂಕ: 5-1-2021

ಕ.ವಿ.ವಿ ಆವರಣ ಮತ್ತು ಕರ್ನಾಟಕ ಕಾಲೇಜು ಆವರಣಾ ಮತ್ತು ಇತರೆ ಅಂಗ ಸಂಸ್ಥೆ ಆವರಣಗಳಲ್ಲಿರುವ ಹುಣಸೆ(ಎರಡನೇಬಾರಿ) ಮತ್ತು ಮಾವು ಪಸಲುಗಳನ್ನು2020-21ನೇಸಾಲಿಗೆ ಟೆಂಡರ/ಬಹಿರಂಗ ಹರಾಜನ್ನು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ.ವಿವರಣೆ ಈ ಕೆಳಗಿನಂತಿದೆ.

| ಅ. ನಂ | ಆವರಣಗಳ ಹೆಸರು | ಗಿಡಗಳ ಸಂಖ್ಯೆ | ಹರಾಜಿನಲ್ಲಿಭಾಗವಹಿಸಲು ಕಟ್ಟಬೇಕಾದ ಠೇವಣಿ | ಸುರಕ್ಷಾ ಠೇವಣಿ |
|---|---|---|---|---|
| 1 | ಕ.ವಿ.ವಿ ಆವರಣ | ಹುಣಸೆ- 46 | **20,000=00** | 2000=00 |
| 2 | ಕ.ವಿ.ವಿ ಆವರಣ ಗಾಂಧಿ ಭವನದ ಹಿಂದಿನ ತೋಟ | ಮಾವು-106 | **80,000=00** | 3000=00 |
| 3 | ಕವಿವಿ ಆವರಣ 'ಇ' ಕ್ವಾಟರ್ಸ ತೋಟ | ಮಾವು-59 | **15,000=00** | 2000=00 |
| 4 | ಕವಿವಿ ಆವರಣ ಗಣೇಶ ನಗರದ ತೋಟ | ಮಾವು-70 | **10,000=00** | 2000=00 |
| 5 | ಕವಿವಿ ಸಸ್ಯೋದ್ಯಾನ ಮತ್ತು ಪೇರಲ ತೋಟದಲ್ಲಿರುವ ಮಾವು | ಮಾವು-30 +24 | **500=00** | 200=00 |
| 6 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿರುವ ಮಾವು | ಮಾವು- 23 | **500=00** | 200=00 |

### ಟೆಂಡರ ಕರಾರುಗಳು

1. ಮೇಲ್ಕಾಣಿಸಿದ ಪಸಲುಗಳನ್ನು ಕೊಳ್ಳಲಿಚ್ಚಿಸುವವರು, ಪಸಲು ಗಿಡಗಳನ್ನು ಚನ್ನಾಗಿ ಗುರುತಿಸಿಕೊಂಡು ಹಣಕಾಸು ಅಧಿಕಾರಿಗಳು, ಕ.ವಿವಿ ಧಾರವಾಡ ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಪಸಲು ಠೇವಣಿ ಹಣವನ್ನು ಪ್ರತಿ ಪಸಲಿಗು ಪ್ರತ್ರೇಕವಾಗಿ ಹಣದ ಡಿಡಿ ಯನ್ನು ಲಗತ್ತಿಸಬೇಕು. ಮತ್ತು ನಿಗದಿ ಪಡಿಸಿದ ಹಣ ಸಂದಾಯ ಮಾಡಿ ಟೆಂಡರ ಪಾರ್ಮ ಪಡೆದುಕೊಂಡು ಟೆಂಡರನಲ್ಲಿ ಭಾಗವಹಿಸಬೇಕು. ಟೆಂಡರ ಪಾರ್ಮನ್ನು ರೂ. **400=00** + CGST and SGST **(18 %)**= ಒಟ್ಟು ರೂ. **472=00**. ರೂ. **400=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಪಾರ್ಮ ಕೊಡಲಾಗುವದು. CGST and SGST **(72=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಪಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಪಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

2. ದಿನಾಂಕ: **20-1-21** ರಂದು ಮದ್ಯಾಹ್ನ **2.30** ಗಂಟೆ ಒಳಗಾಗಿ ಟೆಂಡರ ಸಲ್ಲಿಸಬೇಕು. ಅದೇ ದಿವಸ **3.00** ಗಂಟೆಯ ನಂತರ ಪಸಲು ಮಾರಾಟ ಸಮೀತಿ ಸದಸ್ಯರು ಬಂದ ಬಳಿಕ ಹರಾಜು ನಡೆಸಲಾಗುವದು. ಅವಧಿ ಮೀರಿ ಬಂದ ಟೆಂಡರಗಳನ್ನು ಸ್ವಿಕರಿಸುವದಿಲ್ಲಾ. ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ಕಡ್ಡಾಯುವಾಗಿ **3.00** ಗಂಟೆಗೆ ಇರತಕ್ಕದ್ದು. ಇಲ್ಲವಾದಲ್ಲಿ ತಾವು ಲಿಕಿತ ರೂಪದಲ್ಲಿ ಹಾಕಿದ ಟೆಂಡರ ಬೆಲೆಯನ್ನು ಮಾತ್ರ ಪರಿಗಣಿಸಲಾಗುವದು.

3. ಮೋಹರಾದ ಟೆಂಡರಗಳನ್ನು ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಪಸಲು ನೀಡಲಾಗುವದು. **ಟೆಂಡರ ಪಾರ್ಮಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಮರುಳಿಸಲಾಗುವದಿಲ್ಲಾ.**

4. ಹರಾಜಿನಲ್ಲಿ ಪಸಲು ಪಡೆದವರು ಟೆಂಡರ: ಬಹಿರಂಗ ಹರಾಜು ದರದಲ್ಲಿ ಪಸಲು ಠೇವಣಿ ಹಣ ಹೊರತು ಪಡಿಸಿ ಉಳಿದ ಹಣದ ಶೇಖಡಾ 75% ರಷ್ಟು ಹಣವನ್ನು ಮರು ದಿನ ಬ್ಯಾಂಕಿನ ಅವದಿವೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ತಾವು ಕೊಂಡ ಪಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.

5. ಟೆಂಡರ : ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗಿಕೃತವಾಗಿ ಬಂದ ನಂತರ ಇನ್ನೂಳಿದ ಹಣವನ್ನು ಮತ್ತು ಪಸಲು ಸುರಕ್ಷಾ ಠೆವಣಿ ಹಣ ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಶೇಖಡಾ 75% ರಷ್ಟು ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು.

6. ಪಸಲುಗಳಿಗೆ ಯೋಗ್ಯ ಧಾರಣೆಯು ಬಾರದಿದ್ದಲ್ಲಿ ಟೆಂಡರ **ಹರಾಜು ದರ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು** ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ. ಸದರ ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಪಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಪಸಲು ಕಟಾವು ಅನುಮತಿ ಪಡೆದ ನಂತರವು ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಮ್ಮ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.ಸುರಕ್ಷಾ ಠೇವಣಿ ಹಣವನ್ನು ಪಸಲು ಕಟಾವು ಮುಗಿದ ನಂತರ ಹಿಂತಿರುಗಿಸಲಾಗುವದು. ಪಸಲು ತೆಗೆಯುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ಕ.ವಿ.ವಿ ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯದ ಆಸ್ತಿಗೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು. ಕೊಂಡ ಪಸಲನ್ನು ತಾವೇ ಕಾಯಬೇಕು. ಟೆಂಡರ ನಡೆಯುವ ಸಮಯದಲ್ಲಿ ಶಾಂತತೆ ಕಾಪಾಡುವದು ತುಂಬಾ ಅವಶ್ಯ. ವಿಶ್ವವಿದ್ಯಾಲಯದ ಅನುಮತಿ ಪತ್ರವಿಲ್ಲದೆ ಯಾವುದೇ ಕಾರಣಕ್ಕೂ ಪಸಲನ್ನು ಕಟಾವು ಮಾಡುವಂತಿಲ್ಲಾ. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು. (Mobile No. 8762270302)

Sd/-
**ಕುಲಸಚಿವರು**